

ನವವಿವಾಹಿತ ಪತ್ನಿ: 'ಏನ್ರೀ ನಾನು ಪ್ರತಿದಿನ ನಿಮಗೆ ಈ ರೀತಿ ಅಡುಗೆ ಮಾಡಿ ತಿನ್ನಿಸಿದರೆ ನನಗೇನು ಸಿಗುತ್ತದೆ?'

ಗಂಡ: 'ನನ್ನ ವಿಮಾ ಪಾಲಿಸಿ ಹಣ.'

★★★

ನಾಟಕಕಾರ: 'ನಿನ್ನೆ ನೀವು ನೋಡಿದಿರಲ್ಲಾ ಆ ನಾಟಕ ಹ್ಯಾಪಿ ಎಂಡಿಂಗಾ?'

ಗುಂಡ: 'ಹೌದು! ಸದ್ಯ ಮುಗೀತಲ್ಲಾ ಅಂತ ಎಲ್ಲರೂ ಸಂತೋಷಪಟ್ಟರು.'

★★★

ನಾಣಿ: 'ಏನೋ ಗುಂಡ ನಿನ್ನ ಹೆಂಡ್ತಿ ಮಧ್ಯಾಹ್ನ 12 ಗಂಟೆಗೆ ರಂಗೋಲಿ ಹಾಕ್ತಿದ್ದಾಳೆ?'

ಗುಂಡ: 'ಎದ್ದ ಕೂಡಲೇ ಬಾಗಿಲ ಮುಂದೆ ನೀರು ಚಿಮುಕಿಸಿ ರಂಗೋಲಿ ಹಾಕುವುದು ಅವಳ ಅಭ್ಯಾಸ!'

★★★

ಗುಂಡ: 'ಸಾರ್ ಕೆಎಸ್ಸಾರ್‌ಟಿಸಿಯವರಿಗೆ ಬಸ್ಸಿನಲ್ಲಿ ಫ್ರೀ! ಕೆಇಬಿಯವರಿಗೆ ಕರೆಂಟು ಫ್ರೀ! ನಮಗೇನು?'

ಅಗ್ನಿಶಾಮಕದಳದ ಅಧಿಕಾರಿ: 'ಬೂದಿ ಫ್ರೀ!'

★★★

ಸಾವಿನ ಅಂಚಿನಲ್ಲಿದ್ದ ಪತಿ: 'ನಾನು ಸತ್ತ ನಂತರ ನೀನು ಕುಲಕರ್ಣಿಯನ್ನು ಮದುವೆಯಾಗಬೇಕು.'

ಹೆಂಡತಿ: 'ಏನು ಕುಲಕರ್ಣಿಯನ್ನು ಮದುವೆಯಾಗಬೇಕಾ? ಅವನು ನಿಮ್ಮ ಪರಮ ಶತ್ರು ಅಲ್ಲವೇ?'

ಪತಿ: 'ಹೌದು! ನಾನು ಅವನ ಮೇಲೆ ಸೇಡು ತೀರಿಸಿಕೊಳ್ಳಬೇಕು. ಅದಕ್ಕೆ.'

★★★



ನಾಣಿ: 'ದಿನೇ ದಿನೇ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿದೆ. ನೀನು ಹೇಗೆ ನಿಭಾಯಿಸುತ್ತೀಯಾ?'

ಗುಂಡ: 'ನನಗೆ ಬರೆಯುವ ಅಭ್ಯಾಸ ಇದೆ. ಅದರಿಂದ ಯೋಚನೆಯಿಲ್ಲ.'

ನಾಣಿ: 'ಹೌದಾ? ಕಥೆ, ಕವನ, ಕಾದಂಬರಿ ಏನಾದರೂ ಬರೀತೀಯೇನು?'

ಗುಂಡ: 'ಛೆ! ಛೆ! ಹಾಗೇನೂ ಇಲ್ಲ! ಆಗಾಗ್ಗೆ ನನ್ನ ಮಾವನಿಗೆ ಪತ್ರ ಬರೀತಾ ಇರ್ತೇನೆ.'

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು

## ಸುಮ್ಮನೆ ಕೂತಿದ್ರಲ್ಲಾ!

'ಆ ಕಳ್ಳ ಬಡ್ಡಿ ಹೈದ ನಿಮ್ಮ ಪರ್ಸು, ವಾಚು, ಉಂಗುರ ಎಲ್ಲ ದೋಚಿಕೊಂಡು ಹೋಗ್ತಿದ್ರೂ ಬಾಯ್ಮುಚ್ಕೊಂಡು ಸುಮ್ಮನೇ ಕೂತಿದ್ರಲ್ಲಾ..!' ಪತ್ನಿ, ಪತಿ ಪುಂಡನನ್ನು ಮೂದಲಿಸಿದಳು.

'ಹುಚ್ಚಿ! ನನ್ನನ್ನೇನು ಅಷ್ಟು ಮುಠ್ಠಾಳ ಅಂದ್ಕೊಂಡ್ಬಿಟ್ಟಿದ್ದೀಯಾ! ನಾನು ಬಾಯಿ ಬಿಟ್ಟಿದ್ದಿದ್ದರೆ ಬಾಯೊಳಗಿರುವ ಎರಡು ಬಂಗಾರದ ಹಲ್ಲುಗಳನ್ನೂ ದೋಚಿಕೊಂಡು ಹೋಗ್ತಿದ್ದ' ಎಂದ ಪುಂಡ ತನ್ನ ಜಾಣತನವನ್ನು ಪ್ರದರ್ಶಿಸುತ್ತಾ...

## ನಂಬಿಕೆ

ನೌಕರ: ಸ್ವಾಮಿ! ನಿಮಗೆ ನನ್ನ ಮೇಲೆ ನಂಬಿಕೆ ಇಲ್ಲದಿರುವುದರಿಂದ ನಾನು ನಿಮ್ಮ ಮನೆ ನೌಕರಿಯನ್ನು ಬಿಡುತ್ತಿದ್ದೇನೆ.

ಯಜಮಾನ: ಹಾಗೆಂದೋರು ಯಾರು? ಮನೆ–ಬೀರಿನ ಬೀಗದ ಕೈಗಳನ್ನೇ ನಿನ್ನ ಕೈಗೆ ಕೊಟ್ಟಿದ್ದೇನೆ!

ನೌಕರ: ಮತ್ತೆ ಅವುಗಳಲ್ಲಿ ಒಂದು ಬೀಗದ ಕೈಯಲ್ಲೂ ಬೀರ್ ತೆಗೆಯೋದಕ್ಕೆ ಆಗೋದಿಲ್ಲವಲ್ಲ!

(ಸಂ) ಜಿ.ವಿ.ಪ್ರಭು






ಬಿ.ಪಿ ಮತ್ತು ಸಕ್ಕರೆ ಕಾಯಿಲೆಯಿಂದ

ನರಳುತ್ತಿರುವವರಿಗೆ ಒಂದು ಶುಭ ವಾರ್ತೆ !!!
ಈ ಕಾಯಿಲೆಗಳು ನಮ್ಮ ನರಮಂಡಲವನ್ನು ನಾಶ ಮಾಡುವ ಉಪದ್ರವಗಳು.



ಆಯುರ್ವೇದದ ಗಿಡಮೂಲಿಕೆಗಳಿಗೆ ಈ ರೋಗಗಳಿಂದ ಉಂಟಾಗುವ ಉಪದ್ರವಗಳನ್ನು ತಡೆಗಟ್ಟಿ ಕಾಪಾಡಿ ನಮ್ಮನ್ನು ಎಂದಿಗೂ ಚಿರು ಯೌವ್ವನದಲ್ಲಿ ಇಡಬಲ್ಲವು.
ಉಪದ್ರವಗಳು ಹೇಳಿ ಬರುವುದಿಲ್ಲ

ಒಮ್ಮೆ ನರಮಂಡಲ ಹಾಳಾದರೆ ಅದನ್ನು ಸರಿಪಡಿಸಲು ಕಷ್ಟ ಸಾಧ್ಯ.

ಮುಂದಾಗುವ ಉಪದ್ರವಗಳನ್ನು ಮುಂಚಿತವಾಗಿಯೇ ಗುರುತಿಸಿ ಆ ತೊಂದರೆಗಳಿಂದ ರಕ್ಷಣೆ ಪಡೆಯುವುದು ಜಾಣರ ಲಕ್ಷಣ.
ಏಕೆಂದರೆ...
ಉಪದ್ರವಗಳು ಹೇಳಿ ಬರುವುದಿಲ್ಲ.

ನೆನಪಿರಲಿ :
ಲೈಫ್ ನಲ್ಲಿ ರೀ ಪ್ಲೇ ಇಲ್ಲ...



ಹೆಚ್ಚಿನ ಮಾಹಿತಿಯೊಂದಿಗೆ ಬರುವ ವಾರ ಇಲ್ಲಿಯೇ ಸಿಗೋಣ !!!